Language and Literacy

TESS India

# School–home communication

## ಶಾಲೆ – ಮನೆ ಸಂವಹನ





Teacher Education through School-based Support in India
www.TESS-India.edu.in

http://creativecommons.org/licenses/

The Open University

UKaid from the British people

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹತ್ವಾಕಾಂಕ್ಷೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ(ತರಬೇತುದಾರರಿಗೆ) ಸಹಾಯ ಹಸ್ತ ನೀಡುವುದೇ ಟೆಸ್-ಇಂಡಿಯಾ OERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು 'ವಿದ್ಯಾರ್ಥಿ'ಗಳೆಂದು ಪರಿಗಣಿಸಿ, ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್-ಇಂಡಿಯಾ OERನಲ್ಲಿನ ಮಾದರಿಯಂತೆ, ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್-ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ-ವಿದ್ಯಾರ್ಥಿಗಳ ನಡುವಿನ ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ(ತರಬೇತುದಾರರಿಗೆ) ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು** 

ಟೆಸ್- ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು, ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು, ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL01TESSKNV1*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

## ಈ ಘಟಕದಲ್ಲೇನಿದೆ?

ಮನೆ ಹಾಗೂ ಸಮುದಾಯದೊಂದಿಗೆ ಪರಸ್ಪರ ಪ್ರತಿಕ್ರಿಯೆಯಿಂದ ಗಳಿಸಿದ ಜ್ಞಾನ, ಕೌಶಲಗಳು, ಭಾಷೆಗಳು, ಪರಿಕಲ್ಪನೆಗಳು ಹಾಗೂ ಐಡಿಯಾಗಳೊಂದಿಗೆ ಮಕ್ಕಳು ತಮ್ಮ ಶಾಲಾ ಜೀವನವನ್ನು ಆರಂಭಿಸುತ್ತಾರೆ. ಮಕ್ಕಳ ಭಾಷೆ ಹಾಗೂ ಸಾಂಸ್ಕೃತಿಕ ಸಾಮರ್ಥ್ಯಗಳನ್ನು ಅವರ ಬೆಳವಣಿಗೆಯ ಪ್ರಮುಖ ಸಂಪನ್ಮೂಲಗಳೆಂದು ನೀವು ಗುರುತಿಸಿದಾಗ, ಶಾಲೆಯಲ್ಲಿ ಔಪಚಾರಿಕ ಕಲಿಕೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ನಿಮ್ಮ ವಿದ್ಯಾರ್ಥಿಗಳು ತಮ್ಮ ಮನೆ ಹಾಗೂ ಸಮುದಾಯದಲ್ಲಿ ಪಡೆದ ಅನುಭವಗಳಿಗೆ ಮಹತ್ವ ನೀಡುವ ಕುರಿತು, ಭಾಷೆ ಹಾಗೂ ಸಾಕ್ಷರತೆ (ಅಕ್ಷರ ಜ್ಞಾನ) ತರಗತಿಯಲ್ಲಿ ಈ ಅನುಭವಗಳನ್ನು ಬಳಸುವ ವಿಧಾನಗಳ ಕುರಿತು ಈ ಘಟಕದಲ್ಲಿ ನೀವು ವಿಚಾರ ಮಾಡುವಿರಿ.

## ಈ ಘಟಕದಲ್ಲಿ ನೀವೇನು ಕಲಿಯಬಹುದು?

- ನಿಮ್ಮ ದಿನನಿತ್ಯದ ತರಗತಿಯಲ್ಲಿ ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವ ಅವಕಾಶಗಳನ್ನು ಕಲ್ಪಿಸಿಕೊಳ್ಳುವ ಬಗ್ಗೆ.
- ವಿದ್ಯಾರ್ಥಿಗಳು ಶಾಲೆಯ ಹೊರಗೆ ಪಡೆದ ಅನುಭವಗಳನ್ನು ಭಾಷಾ ತರಗತಿಗಳಲ್ಲಿ ಬಳಸುವುದಕ್ಕಾಗಿ ಪಾಠವನ್ನು ಯೋಜಿಸುವ ವಿಧಾನದ ಬಗ್ಗೆ.

## ಈ ಮಾರ್ಗ ಏಕೆ ಪ್ರಮುಖ?

ವಿದ್ಯಾರ್ಥಿಗಳು ತಮ್ಮ ಹೆಚ್ಚಿನ ಸಮಯವನ್ನು ಮನೆ ಹಾಗೂ ಸಮುದಾಯದೊಂದಿಗಿನ ಅನೌಪಚಾರಿಕ ಕಲಿಕೆಗಾಗಿ ಬಳಸುತ್ತಾರೆ. ಬೋಧನೆಯ ಪ್ರಮುಖ ಸಂಪನ್ಮೂಲವಾಗಿ ಪಠ್ಯಪುಸ್ತಕವನ್ನು ಅವಲಂಬಿಸಿರುವ ಪ್ರವೃತ್ತಿ ತಿಳಿಸುವುದೇನೆಂದರೆ, ವಿದ್ಯಾರ್ಥಿಗಳು ತರಗತಿಗೆ ತಮ್ಮೊಂದಿಗೆ ತರುವ ಕೌಶಲಗಳು ಜ್ಞಾನ ಹಾಗೂ ಅನುಭವಗಳನ್ನು ಶಿಕ್ಷಕರು ಕಡೆಗಣಿಸುತ್ತಿದ್ದಾರೆ.

ಮಕ್ಕಳು ಶಾಲೆಗೆ ಮೊದಲ ಬಾರಿಗೆ ಬಂದಾಗ ಅವರು ಎದುರಿಸುವ ಅಪರಿಚಿತ ವ್ಯಕ್ತಿಗಳು, ದಿನನಿತ್ಯದ ಕಾರ್ಯಗಳು ಹಾಗೂ ಭಾಷೆಗಳಿಂದ ಗೊಂದಲಕ್ಕೊಳಗಾಗಬಹುದು. ನಿಮ್ಮ ವಿದ್ಯಾರ್ಥಿಗಳಿಗೆ ತಿಳಿದಿರುವ ಭಾಷೆಗಳು ಹಾಗೂ ಸಾಂಸ್ಕೃತಿಕ ಅಭ್ಯಾಸಗಳ ವೈವಿಧ್ಯತೆಗೆ ಮಹತ್ವ ನೀಡುವುದರಿಂದ, ಹೊಸ ಸನ್ನಿವೇಶದಲ್ಲಿ ಅವರು ಹೆಚ್ಚು ನಿರಾಂತಕವಾಗಿರುವಂತೆ ನೀವು ಮಾಡಬಹುದು.

ಮಕ್ಕಳು ಪ್ರತಿನಿತ್ಯ ತಮ್ಮ ಮನೆ ಕಲಿಕೆ ಹಾಗೂ ಶಾಲಾ ಕಲಿಕೆಯ ನಡುವೆ ಸೇತುವೆಯನ್ನು ಕಟ್ಟಬೇಕು. ಈ ಬದಲಾವಣೆಯನ್ನು ಸುಗಮಗೊಳಿಸಲು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಚಟುವಟಿಕೆಗಳನ್ನು ಪ್ರಸ್ತುತ ಘಟಕವು ಸಲಹೆ ಮಾಡಿದೆ.

## 1 ಶಾಲೆಯ ಹೊರಗೆ ವಿದ್ಯಾರ್ಥಿಗಳ ಕಲಿಕೆ

**ಚಿಂತನೆಗೊಂದು ಕ್ಷಣ**

- ಶಾಲೆಯ ಹೊರಗೆ ನಿಮ್ಮ ವಿದ್ಯಾರ್ಥಿಗಳು ಗಳಿಸಿರಬಹುದಾದ ಜ್ಞಾನ ಹಾಗೂ ಕೌಶಲಗಳು ಯಾವುವು?
- ನಿಮ್ಮ ವಿದ್ಯಾರ್ಥಿಗಳ ಮನೆ ಅಥವಾ ಸಮುದಾಯ ಭಾಷೆ ಹಾಗೂ ಸಾಂಸ್ಕೃತಿಕ ಜ್ಞಾನವು ಅವರ ಶಾಲಾ ಜೀವನಕ್ಕೆ ಉಪಯುಕ್ತವೆಂದು ನೀವು ಅಭಿಪ್ರಾಯ ಪಡುವಿರಾ? ಹೌದಾದರೆ ಏಕೆ? ಇಲ್ಲವಾದರೆ ಏಕೆ?

ಸಂದರ್ಭ ಅಧ್ಯಯನ 1 ರಲ್ಲಿ ಶಿಕ್ಷಕಿಯೊಬ್ಬರು ಶಾಲಾಪೂರ್ವ ಮಗುವೊಂದರ ಕಲಿಕಾ ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

## ಸಂದರ್ಭ ಅಧ್ಯಯನ 1: ಶ್ರೀಮತಿ ಸಹನಾರವರು ಶಾಲಾಪೂರ್ವ ಮಗುವೊಂದರ ಜ್ಞಾನ ಹಾಗೂ ಕೌಶಲಗಳ ಕುರಿತು ವಿಚಾರ ಮಾಡುತ್ತಾರೆ

ಮಂಗಳೂರಿನ ಪ್ರಾಥಮಿಕ ಶಾಲೆಯೊಂದರ ಶಿಕ್ಷಕಿ ಸಹನಾರವರು, ಅಂಗಡಿಯೊಂದರಲ್ಲಿ ಡಬ್ಬಿಯೊಂದನ್ನು ತಾವು ಕೊಳ್ಳುವಾಗಿನ ಅನುಭವವನ್ನು ವರ್ಣಿಸುತ್ತಾರೆ. ಸಹನಾರವರು ಡಬ್ಬಿಯನ್ನು ಕೊಳ್ಳಲು ಹೋದ ಅಂಗಡಿ, ಎರಡನೇ ತರಗತಿಯಲ್ಲಿರುವ ವಿದ್ಯಾರ್ಥಿಯ ಪೋಷಕರದ್ದು. ಅಂಗಡಿಯಲ್ಲಿ ಆಕೆ ತಮ್ಮ ವಿದ್ಯಾರ್ಥಿಯ, ಇನ್ನೂ ಶಾಲೆಗೆ ಸೇರಿಲ್ಲದ ನಾಲ್ಕು ವರ್ಷದ ತಂಗಿ ಶಿಲ್ಪಳನ್ನು ಭೇಟಿಯಾಗುತ್ತಾರೆ.

ಶಿಲ್ಪಳು ಒಂದು ಕಾರ್ಡ್ ಬೋರ್ಡ್ ಪೆಟ್ಟಿಗೆಯ ಪಕ್ಕದಲ್ಲಿ ನೆಲದ ಮೇಲೆ ಕುಳಿತಿದ್ದಾಳೆ. ಪೆಟ್ಟಿಗೆಯಿಂದ ಪ್ಯಾಕೆಟ್ ಗಳನ್ನು ಹೊರತೆಗೆದು ಎಣಿಕೆ ಮಾಡುತ್ತಿದ್ದಾಳೆ ಹಾಗೂ ವಿಂಗಡಿಸಿ, ಜೋಡಿಸುತ್ತಿದ್ದಾಳೆ. ಅವಳ ತಂದೆ ವಸ್ತುಗಳನ್ನು ಕೊಳ್ಳಲು ಬಂದವರೊಂದಿಗೆ ಮಾತನಾಡುತ್ತಿದ್ದಾರೆ. ನಾನು ಶಿಲ್ಪಳನ್ನು ಕೇಳಿದೆ. 'ನಿನ್ನ ಅಂಗಡಿಯಲ್ಲಿ ಡಬ್ಬಿ ಮಾರುತ್ತೀಯಾ?' ಅವಳು ತನ್ನ ತಾಯಿಯನ್ನು ಕರೆದಳು. ಆಕೆಯ ತಾಯಿ ಅಂಗಡಿಯ ಹಿಂಬಾಗಿಲಿನಲ್ಲಿ ಕಾಣಿಸಿಕೊಂಡು ಮೂಲೆಯ ಕಡೆ ತೋರಿಸಿ, ಮಗುವಿನ ಮನೆ ಭಾಷೆಯಲ್ಲಿ ಪ್ರತಿಕ್ರಿಯಿಸಿದಳು. ಆದರೆ, ಕನ್ನಡದಲ್ಲಿ 'ಡಬ್ಬಿ' ಎಂಬ ಪದವನ್ನು ಬಳಸಿದಳು. ಶಿಲ್ಪಳು ನನ್ನನ್ನು ಡಬ್ಬಿಗಳಿರುವ ಕಡೆಗೆ ಕರೆದುಕೊಂಡು ಹೋದಳು. ಬೇರೆ ಬೇರೆ ಬಣ್ಣಗಳ ಎರಡು ಮೂರು ಡಬ್ಬಿಗಳನ್ನು ತೆಗೆದುಕೊಂಡು ನನಗೆ ತೋರಿಸಿದಳು. ನಾನು ಆರಿಸಿಕೊಂಡ ಕೆಂಪು ಬಣ್ಣದ ಡಬ್ಬಿಯನ್ನು, ಶಿಲ್ಪಳು ಅಂಗಡಿಯ ಕೌಂಟರ್ ಗೆ ತೆಗೆದುಕೊಂಡು ಹೋದಳು. ನಂತರ ಆಕೆ ನನ್ನಿಂದ ಹಣವನ್ನು ಪಡೆದು ತನ್ನ ತಾಯಿಗೆ ಕೊಟ್ಟಳು. ತಾಯಿಯಿಂದ ಚಿಲ್ಲರೆ ಪಡೆದು ನನಗೆ ಹಿಂತಿರುಗಿಸಿದಳು. ಶಿಲ್ಪಳು ಡಬ್ಬಿಯನ್ನು ಪೇಪರ್ ನಿಂದ ಕಟ್ಟಿಕೊಡಲು ತನ್ನ ತಾಯಿಗೆ ಸಹಾಯ ಮಾಡಿದಳು. ಡಬ್ಬಿಯನ್ನು ನಾನು ನನ್ನ ಚೀಲದಲ್ಲಿರಿಸಿಕೊಂಡೆ. ಕೊನೆಗೆ ಅಕೆ ತನ್ನ ತಾಯಿಯೊಂದಿಗೆ ಬಂದು ಕನ್ನಡದಲ್ಲಿ ವಂದಿಸುವ ಮೂಲಕ ನನ್ನನ್ನು ಬೀಳ್ಕೊಟ್ಟಳು.

ಅಂಗಡಿಯಿಂದ ಹೊರ ಬರುವಾಗ, ನಾನು ಶಿಲ್ಪಳು ಪಡೆಯುತ್ತಿದ್ದ ಜ್ಞಾನ ಹಾಗೂ ಕೌಶಲಗಳು ಆಕೆ ಶಾಲೆಗೆ ಸೇರಿದ ನಂತರ ಉಪಯುಕ್ತವಾಗುವ ಬಗ್ಗೆ ವಿಚಾರ ಮಾಡತೊಡಗಿದೆ.

(Adapted from Kenner, 2000)

**ಚಿಂತನೆಗೊಂದು ಕ್ಷಣ!**

- ಭಾಷೆ ಹಾಗೂ ಸಂವಹನದ ಬಗ್ಗೆ ಶಿಲ್ಪಳಿಗೆ ಏನು ತಿಳಿದಿದೆ?
- ಈ ಸಂದರ್ಭ ಅಧ್ಯಯನದಲ್ಲಿ ಶಿಲ್ಪಳು ವ್ಯಕ್ತಪಡಿಸಿದ ಇತರ ಕೌಶಲಗಳು ಯಾವುವು?

ನಿಮ್ಮ ಐಡಿಯಾಗಳನ್ನು ನಮ್ಮದರೊಂದಿಗೆ ಹೋಲಿಸಿ:

ಶಿಲ್ಪಳು ಅಂಕಿಗಳ ಜ್ಞಾನ ಪಡೆಯುತ್ತಿದ್ದಾಳೆ. ಅವಳು ಎಣಿಸಬಲ್ಲಳು, ವಿಂಗಡಿಸಿ ವರ್ಗೀಕರಿಸಬಲ್ಲಳು. ಹಣ ಹಾಗೂ ಚಿಲ್ಲರೆಯ ಬಗ್ಗೆ ಅವಳು ತಿಳುವಳಿಕೆ ಪಡೆಯಲು ಆರಂಭಿಸಿದ್ದಾಳೆ. ಅಂಗಡಿಗಳು ಹೇಗೆ ಕೆಲಸ ಮಾಡುತ್ತವೆಂದು ಈಗ ಅವಳಿಗೆ ಗೊತ್ತಿದೆ. ಅವಳು ಆಲಿಸಬಲ್ಲಳು, ಪ್ರಶ್ನೆಯೊಂದನ್ನು ಅರ್ಥ ಮಾಡಿಕೊಂಡು ಪ್ರತಿಕ್ರಿಯಿಸಬಲ್ಲಳು, ಮಾಹಿತಿ ಪಡೆಯಬಲ್ಲಳು. ಅಂಗಡಿಗೆ ಕೊಳ್ಳಲು ಬಂದವರೊಂದಿಗೆ ಸೌಜನ್ಯದಿಂದ ಹೇಗೆ ಪ್ರತಿಕ್ರಿಯಿಸಬೇಕೆಂದು ಅವಳಿಗೆ ತಿಳಿದಿದೆ.

ಶಿಲ್ಪಳು ತನ್ನ ಮನೆ ಭಾಷೆಯಲ್ಲಿ ಆತ್ಮವಿಶ್ವಾಸದಿಂದ ಮಾತನಾಡಬಲ್ಲಳು. ಅವಳಿಗೆ ಬಣ್ಣಗಳ ಹೆಸರುಗಳು, ಪ್ರಶ್ನೆ, ಸೂಚನೆ ಹಾಗೂ ದಿಕ್ಕುಗಳ ಭಾಷೆ ತಿಳಿದಿದೆ. ಸ್ವಲ್ಪ ಕನ್ನಡವೂ ಅವಳಿಗೆ ತಿಳಿದಿದ್ದು, ಅದನ್ನು ಅವಳು ಧನ್ಯವಾದಗಳನ್ನು ತಿಳಿಸಲು ಹಾಗೂ  ಬೀಳ್ಕೊಡಲು ಬಳಸುತ್ತಾಳೆ. ಜನರು ವಿವಿಧ ಭಾಷೆಗಳಲ್ಲಿ ಸಂವಹನ ಮಾಡಬಹುದೆಂಬುದನ್ನು ಆಕೆ ತಿಳಿದುಕೊಳ್ಳುತ್ತಿದ್ದಾಳೆ.

ವೀಕ್ಷಣೆ, ಪ್ರತಿಕ್ರಿಯೆ ಹಾಗೂ ಅನುಕರಣೆಯ ಮೂಲಕ ಶಿಲ್ಪಳು ಸಾಮಾನ್ಯ ಜ್ಞಾನ ಹಾಗೂ ಸಂವಹನ ಕೌಶಲಗಳನ್ನು ಗಳಿಸುತ್ತಿದ್ದಾಳೆ. ಇವು ಆಕೆ ಶಾಲೆಗೆ ಹೋದಾಗ ಹೆಚ್ಚಿನ ಕಲಿಕೆ ಹಾಗೂ ಭಾಷಾ ಬೆಳವಣಿಗೆಗೆ ಭದ್ರ ಬುನಾದಿಯಾಗುತ್ತವೆ.

ವಿದ್ಯಾರ್ಥಿಗಳು ಮನೆಯಲ್ಲಿ, ಸಮುದಾಯದಲ್ಲಿ ಗಳಿಸುವ ಜ್ಞಾನ ಹಾಗೂ ಕೌಶಲಗಳು ಅವರು ಶಾಲೆಗೆ ಹೋಗಲು ಆರಂಭಿಸಿದಂತೆ ಮುಂದುವರೆಯುತ್ತವೆ. ನಿಮ್ಮ ವಿದ್ಯಾರ್ಥಿಗಳು ಅವರ ಒಡಹುಟ್ಟಿದವರನ್ನು ಬೆಳೆಸುವುದು, ಅಜ್ಜ-ಅಜ್ಜಿಯ ಕಾಳಜಿ ಮಾಡುವುದು, ಮನೆಯಲ್ಲಿನ

ಪ್ರಾಣಿಗಳನ್ನು ನೋಡಿಕೊಳ್ಳುವುದು, ಮಾರುಕಟ್ಟೆಯಲ್ಲಿ, ಅಂಗಡಿಗಳಲ್ಲಿ ತಮ್ಮ ಪೋಷಕರಿಗೆ ನೆರವಾಗುವುದು, ಅಡುಗೆ ಮಾಡಲು ಸಹಕರಿಸುವುದು ಈ ರೀತಿ ವಿವಿಧ ಸಹಾಯಗಳನ್ನು ಮಾಡುತ್ತಿರಬಹುದು. ಅದರೊಂದಿಗೆ ಕರಕುಶಲತೆಯಲ್ಲಿ ಪ್ರಾವೀಣ್ಯತೆ ಗಳಿಸಿರಬಹುದು ಅಥವಾ ಆಟದಲ್ಲಿ ಸಂತೋಷದಿಂದ ಪಾಲ್ಗೊಳ್ಳುತ್ತಿರಬಹುದು. ಇಂತಹ ಚಟುವಟಿಕೆಗಳು ಅವರ ಭಾಷೆ ಹಾಗೂ ಸಾಕ್ಷರತೆ (ಅಕ್ಷರ ಜ್ಞಾನ) ಯ ಬೆಳವಣಿಗೆಗೆ ಹಲವಾರು ಅನೌಪಚಾರಿಕ ಅವಕಾಶಗಳನ್ನು ಒದಗಿಸುತ್ತವೆ. ಶಾಲಾ ಸನ್ನಿವೇಶದಲ್ಲಿ ಈ ಅವಕಾಶಗಳನ್ನು ಪೋಷಿಸಬಹುದು.

## 2 ತರಗತಿ ಹರಟೆಗಳು (Classroom chats)

ನಿಮ್ಮ ವಿದ್ಯಾರ್ಥಿಗಳಿಗೆ ಅವರ ಆಸಕ್ತಿಗಳು, ಚಟುವಟಿಕೆಗಳು ಹಾಗೂ ಬದ್ಧತೆಗಳ (commitments) ಬಗ್ಗೆ ಮಾತನಾಡಲು ಅವಕಾಶಗಳನ್ನು ನೀಡುವುದರಿಂದ ತರಗತಿಯಲ್ಲಿ ವಿಶ್ವಾಸಾರ್ಹ ಸಂವಹನವನ್ನು ಪ್ರೋತ್ಸಾಹಿಸಬಹುದು. ಇದರಿಂದಾಗಿ ನಿಮ್ಮ ವಿದ್ಯಾರ್ಥಿಗಳ ಮಾತನಾಡುವಿಕೆ ಹಾಗೂ ಆಲಿಸುವಿಕೆಯ ಕೌಶಲಗಳನ್ನು ಮೌಲ್ಯಮಾಪನ ಮಾಡಲು ನಿಮಗೆ ಸಾಧ್ಯವಾಗುತ್ತದೆ. ಅದರಲ್ಲೂ ವಿಶೇಷವಾಗಿ ಶಾಲೆಯ ಭಾಷೆ ಹಾಗೂ ಮನೆ ಭಾಷೆ ಒಂದೇ ಇರದ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನವಾಗುತ್ತದೆ.
ಈ ಮುಂದಿನ ಪ್ರಾಯೋಗಿಕ ಚಟುವಟಿಕೆಗಳನ್ನು ನಿಮ್ಮ ಅನುಕೂಲಕ್ಕಾಗಿ ವಿನ್ಯಾಸಗೊಳಿಸಲಾಗಿದೆ.

### ಚಟುವಟಿಕೆ 1: ದಿನನಿತ್ಯದ ಹರಟೆ

ಶಾಲೆಯ ಒಂದು ಅವಧಿಯಲ್ಲಿ ವಿದ್ಯಾರ್ಥಿಗಳೊಂದಿಗೆ ವೈಯಕ್ತಿಕವಾಗಿ ಅಥವಾ ಒಂದು ಗುಂಪಿನಲ್ಲಿ ಅಲ್ಪಾವಧಿಯ ಅನೌಪಚಾರಿಕ ಹರಟೆಯನ್ನು ದಿನನಿತ್ಯದ ಅಭ್ಯಾಸವಾಗಿ ಪ್ರಾರಂಭಿಸಿ. ಇದು ದಿನದ ಪ್ರಾರಂಭದಲ್ಲಾಗಲೀ, ಕೊನೆಯಲ್ಲಾಗಲೀ ಅಥವಾ ವಿರಾಮದ ಸಮಯದಲ್ಲಾಗಲೀ ಇರಲಿ, ನಿಮ್ಮ ಎಲ್ಲ ವಿದ್ಯಾರ್ಥಿಗಳೊಂದಿಗೆ ಹೆಚ್ಚು ಕಾಲ ಸಂವಹನ ಮಾಡುವ ಬಗ್ಗೆ ಖಾತ್ರಿ ಇರಲಿ. ಇದರ ಬಗ್ಗೆ ಗಮನವಿರಿಸಲು ಒಂದು ಸರಳ ಗುರುತು ಪಟ್ಟಿಯನ್ನು (ticklist) ಇರಿಸಿಕೊಳ್ಳಬಹುದು.
ಉದಾಹರಣೆಗೆ ಇತ್ತೀಚೆಗೆ ಅವರು ಹಬ್ಬವೊಂದನ್ನು ಸಂಭ್ರಮದಿಂದ ಆಚರಿಸಿದ ಬಗ್ಗೆ, ಇತ್ತೀಚೆಗೆ ಸುತ್ತಮುತ್ತ ಆದ ಕೋಲಾಹಲವೆಬ್ಬಿಸಿದ ಪ್ರಸಂಗದಿಂದ ಪ್ರಭಾವಿತರಾಗಿರುವ ಸಾಧ್ಯತೆಯ ಬಗ್ಗೆ, ಒಂದು ನಿರ್ದಿಷ್ಟ ಕ್ರಿಕೆಟ್ ಸ್ಪರ್ಧೆಯ ವಿವರಗಳನ್ನು ಅವರು ತಿಳಿಯುತ್ತಿರುವ ಬಗ್ಗೆ ಮಕ್ಕಳನ್ನು ಕೇಳಿ. ನಿಮ್ಮ ವಿದ್ಯಾರ್ಥಿಗಳು ಶಾಲೆಯ ಹೊರಗೆ ಏನು ಕಲಿಯುತ್ತಿರುವರೆಂಬುದನ್ನು ಪಾಠದಲ್ಲಿ ಅವರು ಗಮನಿಸಬೇಕಾದ ಅಂಶಗಳೊಂದಿಗೆ  ಜೋಡಿಸಲು ಇರುವ ಅವಕಾಶಗಳನ್ನು ಹುಡುಕಿ. ನೀವು ಹೀಗೆ ಹೇಳಬಹುದು:

- ನನಗೆ ಗೊತ್ತು, ನಿಮ್ಮಲ್ಲಿ ಬಹಳ ಮಂದಿ ಈ ತಿಂಗಳು ಹಬ್ಬವೊಂದನ್ನು ಆನಂದಿಸಿದಿರಿ.
- ಇಂತಹ ಭಯಂಕರ ಹವಾಮಾನದಲ್ಲಿಯೂ ಮಾರುಕಟ್ಟೆಯಲ್ಲಿ ನಿಮ್ಮ ತಂದೆ-ತಾಯಿಯರಿಗೆ ಸಹಾಯ ಮಾಡಿದ್ದೀರಿ. ಬಹಳ ಒಳ್ಳೆಯದು!
- ಈ ದಿನದ ಗಣಿತ ತರಗತಿಯಲ್ಲಿ ನೀವು, ನಿಮ್ಮ ಕೌಶಲಗಳನ್ನು ತೋರಿಸಬಹುದು ಏಕೆಂದರೆ ನಾವು ಹಣವನ್ನು ಕೊಡುವ ಹಾಗೂ ಕಳೆಯುವ ಲೆಕ್ಕಾಚಾರವನ್ನು ಮಾಡಲಿದ್ದೇವೆ. ನಿಮ್ಮಲ್ಲಿ ಎಷ್ಟು ಮಂದಿ ಮಾರುಕಟ್ಟೆಯಲ್ಲಿ ಚಿಲ್ಲರೆ ಕೊಟ್ಟಿರಿ? ನಿಮ್ಮ ತಂದೆ ಅಥವಾ ತಾಯಿಯೊಂದಿಗೆ ನಿಮ್ಮ ಲೆಕ್ಕಾಚಾರವನ್ನು ಪರೀಕ್ಷಿಸಿಕೊಂಡಿರಾ?

ನಿಮ್ಮ ವಿದ್ಯಾರ್ಥಿಗಳು ನೀಡುವ ಉತ್ತರಗಳು ಅವರು ಶಾಲೆಗೆ ತರುವ ಜ್ಞಾನ ಹಾಗೂ ಕೌಶಲಗಳನ್ನು ಕುರಿತು ನಿಮಗೆ ಒಳನೋಟಗಳನ್ನು ಒದಗಿಸುತ್ತವೆ. ನಿಮ್ಮ ವಿದ್ಯಾರ್ಥಿಗಳ ಬಗ್ಗೆ, ಅವರು ಇತರರೊಂದಿಗೆ ಹಂಚಿಕೊಳ್ಳುವ ಆಸಕ್ತಿಗಳು ಹಾಗೂ ಚಟುವಟಿಕೆಗಳ ಬಗ್ಗೆ ನಿಮಗೆ ತಿಳಿದುಬಂದ ಅಂಶಗಳನ್ನು ಸವಿವರವಾಗಿ ಟಿಪ್ಪಣಿ ಮಾಡಿ.
ವರ್ಷದ ಒಂದು ಅವಧಿಯ ಉದ್ದಕ್ಕೂ ಈ ರೀತಿ ಮಾಡುವುದರೊಂದಿಗೆ, ನಿಮ್ಮ ಪಠ್ಯಪುಸ್ತಕ, ಪಠ್ಯವಸ್ತು ಹಾಗೂ ಪಾಠಯೋಜನೆಗಳನ್ನು ಪರಾಮರ್ಶಿಸುತ್ತಾ ವಿದ್ಯಾರ್ಥಿಗಳಿಗೆ ತಿಳಿದಿರುವ ಅಥವಾ ಅವರಿಗೆ ಆಸಕ್ತಿ ಇರುವ ಅಂಶಗಳೊಂದಿಗೆ ಮುಂದೆ ನೀವು ಬೋಧಿಸುವ ಘಟಕಗಳನ್ನು ಜೋಡಿಸಲು ಇರುವ ಅವಕಾಶಗಳನ್ನು ಕುರಿತು ಗಮನಿಸಿ.
ಮಾತನಾಡುವ ಹಾಗೂ ಆಲಿಸುವ ಚಟುವಟಿಕೆಯನ್ನು ಮುಂದುವರೆಸಲು, ವಿದ್ಯಾರ್ಥಿಗಳಿಗೆ ಅವರು ಶಾಲೆಯಲ್ಲಿ ಇಲ್ಲದಿರುವಾಗ ಏನು ಮಾಡುವರೆಂಬುದನ್ನು ಒಂದು ವಾರದ 'ದಿನಚರಿ'ಯಲ್ಲಿ ಬರೆಯಲು ತಿಳಿಸಿ.

ತರಗತಿಯಲ್ಲಿ ನಿಮ್ಮ ಎಲ್ಲ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಪನ್ಮೂಲ 1 ನ್ನು ಓದಿ



Video: Involving all

## ಚಟುವಟಿಕೆ 2: ತರಗತಿ ಚರ್ಚೆ

ಶಾಲೆಯ ಹೊರಗೆ ವಿದ್ಯಾರ್ಥಿಗಳ ಆಸಕ್ತಿಗಳು ಹಾಗೂ ಅವರ ಬದ್ಧತೆಗಳ (commitments) ಕುರಿತು ಒಂದು ತರಗತಿ ಚರ್ಚೆಯನ್ನು ಯೋಜಿಸಿ ಅವರನ್ನು ಪ್ರೇರೇಪಿಸಲು ವಿಷಯ ಕೇಂದ್ರಿತ ಪ್ರಶ್ನೆಯೊಂದನ್ನು (focused question) ಬಳಸಿ. ಇಲ್ಲಿ ಕೆಲವು ಐಡಿಯಾಗಳಿವೆ. ಆದರೆ ನೀವು ಪ್ರಶ್ನೆಗಳನ್ನು ಸಂದರ್ಭಾನುಸಾರ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

- ಮನೆಯಲ್ಲಿ ನೀವು ಯಾವ ರೀತಿಯಲ್ಲಿ ಸಹಾಯ ಮಾಡುವಿರಿ? ನೀವು ಬಹಳ ಹೆಚ್ಚು ಇಷ್ಟಪಡುವ ಕೆಲಸಗಳು ಯಾವುವು? ನೀವು ಬಹಳ ಕಡಿಮೆ ಇಷ್ಟಪಡುವ ಕೆಲಸಗಳು ಯಾವುವು?
- ಈ ವಾರದಲ್ಲಿ ನಡೆದ ಬಹಳ ಒಳ್ಳೆಯ ಸಂಗತಿ ಯಾವುದು? ನಿಮಗೆ ಬಹಳ ಖುಷಿ ಕೊಟ್ಟ ಸಂಗತಿ ಯಾವುದು?
- ಶಾಲೆಗೆ ರಜೆ ಇದ್ದಾಗ ನೀವು ಏನು ಮಾಡುವಿರಿ?

ಪ್ರಶ್ನೆಗಳನ್ನು ಕಪ್ಪುಹಲಗೆಯ ಮೇಲೆ ಬರೆಯಿರಿ. ನೀವು ಉತ್ತರಿಸುವುದರೊಂದಿಗೆ ಪ್ರಾರಂಭಿಸಿ.

ಇಬ್ಬರು ಅಥವಾ ಮೂವರು ವಿದ್ಯಾರ್ಥಿಗಳನ್ನು ಪ್ರಶ್ನಿಸುವುದರ ಮೂಲಕ ನಿಜವಾಗಿಯೂ ನೀನು ಅದನ್ನು ಎಲ್ಲಿ ಕಲಿತೆ? ಮುಂದೆ ನೀನು ಏನು ಮಾಡುವೆ?  ಈ ರೀತಿಯ ಪ್ರೇರೇಪಣೆ ನೀಡುತ್ತಾ, ಇಡೀ ತರಗತಿಗೆ ಅನುಪಾಲನಾ ಪ್ರಶ್ನೆಗಳನ್ನು ಮುಂದುವರೆಸಿ.

ನಿಮ್ಮ ವಿದ್ಯಾರ್ಥಿಗಳನ್ನು ಸಣ್ಣಗುಂಪುಗಳಲ್ಲಿ ವ್ಯವಸ್ಥೆಗೊಳಿಸಿ, ಕಪ್ಪುಹಲಗೆಯ ಮೇಲಿನ ಪ್ರಶ್ನೆಗಳನ್ನು ಗುಂಪಿನಲ್ಲಿ ಒಟ್ಟಾಗಿ ಚರ್ಚಿಸಲು ತಿಳಿಸಿ. ಒಬ್ಬರು ಮತ್ತೊಬ್ಬರನ್ನು ಪ್ರೇರೇಪಿಸುವ, ಅನುಪಾಲನಾ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಿ. ಅವರು ಮಾತನಾಡುತ್ತಿದ್ದಂತೆ ನೀವು ಎಲ್ಲೆಡೆ ಚಲಿಸಿ, ಗುಂಪುಗಳ ಪರಿವೀಕ್ಷಣೆ ಮಾಡಿ.

ಸಣ್ಣ ಗುಂಪು ಚರ್ಚೆಗಳಿಗೆ ಬದಲಾಗಿ, ನಿಮ್ಮ ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ಸಂದರ್ಶಿಸುವಂತೆ, ಟಿಪ್ಪಣಿ ಬರೆದುಕೊಳ್ಳುವಂತೆ ನಂತರ ತಮ್ಮ ಜೊತೆಗಾರರು ತಿಳಿಸಿದುದನ್ನು ಕುರಿತು ಸಣ್ಣ ವರದಿ ಬರೆಯುವಂತೆ ತಿಳಿಸಬಹುದು.

# 3 ಒಂದು ತರಗತಿ ಯೋಜನಾ ಕಾರ್ಯ

ಮುಂದಿನ ಸಂದರ್ಭ ಅಧ್ಯಯನದಲ್ಲಿ ಶಿಕ್ಷಕಿಯೊಬ್ಬರು ವಿದ್ಯಾರ್ಥಿಗಳ ಬಗ್ಗೆ ತಮ್ಮ ಜ್ಞಾನವನ್ನು ಭಾಷೆ ಹಾಗೂ ಸಾಕ್ಷರತೆ (ಅಕ್ಷರ ಜ್ಞಾನ)ಯ ಒಂದು ವಿಸ್ತೃತ ಯೋಜನಾ ಕಾರ್ಯವನ್ನು ಯೋಜಿಸಲು ಬಳಸುತ್ತಾರೆ.

## ಸಂದರ್ಭ ಅಧ್ಯಯನ 1: ಹಬ್ಬಗಳ ಕುರಿತಾಗಿ ಶಿಕ್ಷಕಿ ರಮ್ಯರವರು ಯೋಜಿಸಿದ ಭಾಷೆ ಹಾಗೂ ಸಾಕ್ಷರತೆ (ಅಕ್ಷರ ಜ್ಞಾನ) ಯ ಯೋಜನಾ ಕಾರ್ಯ

ಐದನೇ ತರಗತಿಯ ಶಿಕ್ಷಕಿ ರಮ್ಯರವರು ಹಬ್ಬಗಳ ಕುರಿತು ಪಠ್ಯಪುಸ್ತಕದಲ್ಲಿರುವ ಪಾಠವೊಂದರಿಂದ ಪ್ರೇರಣೆಗೊಂಡರು.

ನನ್ನ ವಿದ್ಯಾರ್ಥಿಗಳು ಭಾರತದಲ್ಲಿ ಆಚರಿಸುವ ಈದ್, ದೀಪಾವಳಿಯಂತಹ ಕೆಲವು ಪ್ರಮುಖ ಹಬ್ಬಗಳನ್ನು ವರ್ಣಿಸುವ ಪಾಠವನ್ನು ಅದೀಗಷ್ಟೇ ಅಭ್ಯಾಸ ಮಾಡಿದ್ದರು.

ನಮ್ಮ ಸಮುದಾಯಗಳಲ್ಲಿ ಹಲವಾರು ಆಸಕ್ತಿದಾಯಕ ಹಬ್ಬಗಳಿವೆ. ಹಾಗಾಗಿ ಇನ್ನೇನು ಬರಲಿರುವ ಸ್ಥಳೀಯ ಹಬ್ಬಗಳ ಬಗ್ಗೆ ಗಮನ ಕೇಂದ್ರಿಕರಿಸಲು ನಾನು ತೀರ್ಮಾನಿಸಿದೆ.

ನನ್ನ ವಿದ್ಯಾರ್ಥಿಗಳನ್ನು ಅವರು ತೊಡಗಿಕೊಳ್ಳುವ ಹಬ್ಬಗಳು ಯಾವುವೆಂದು ಕೇಳುವ ಮೂಲಕ ಆರಂಭಿಸಿದೆ ಹಾಗೂ ಅವರ ಪ್ರತಿಕ್ರಿಯೆಗಳನ್ನು ಕಪ್ಪು ಹಲಗೆಯ ಮೇಲೆ ಬರೆದೆ.

ನಂತರ ಪ್ರತಿಗುಂಪು ಒಂದು ಹಬ್ಬವನ್ನು ಪ್ರತಿನಿಧಿಸುವಂತೆ ನನ್ನ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವ್ಯವಸ್ಥೆಗೊಳಿಸಿದೆ. ಪ್ರತಿ ಗುಂಪಿಗೂ

> ಒಂದು ದೊಡ್ಡ ಹಾಳೆಯನ್ನು ಕೊಟ್ಟು, ತಾವು ಪ್ರತಿನಿಧಿಸುವ ಹಬ್ಬದ ಬಗ್ಗೆ, ಹಬ್ಬವು ಏತಕ್ಕಾಗಿ ಆಚರಿಸಲ್ಪಟ್ಟಿತು, ಯಾವ ದೇವರುಗಳನ್ನು ಪೂಜಿಸಲಾಯಿತು, ಯಾವ ಸಮುದಾಯಗಳು ತೊಡಗಿಕೊಂಡಿದ್ದವು, ಯಾವ ಸಂಪ್ರದಾಯಗಳನ್ನು ಅನುಸರಿಸಲಾಯಿತು, ಯಾವ ಆಹಾರವನ್ನು ತಯಾರಿಸಲಾಯಿತು, ಯಾರಾದರೂ ವಿಶೇಷ ಉಡುಪುಗಳನ್ನು ಧರಿಸಿದ್ದರೇ ಹಾಗೂ ಯಾವ ಚಟುವಟಿಕೆಗಳಿದ್ದವು ಎಂಬುದನ್ನು ಕುರಿತು ಬರೆಯಲು ತಿಳಿಸಿದೆ. ಚರ್ಚೆ ಹಾಗೂ ಟಿಪ್ಪಣಿ ಬರೆಯಲು ವಿದ್ಯಾರ್ಥಿಗಳು ಬಯಸಿದ್ದಲ್ಲಿ ಅವರ ಮನೆ ಭಾಷೆಯನ್ನು ಬಳಸಬಹುದೆಂದು ತಿಳಿಸಿದೆ.
>
> ನಂತರ ಪ್ರತಿಗುಂಪು ತಾನು ಪ್ರತಿನಿಧಿಸುವ ಹಬ್ಬದ ಕುರಿತು ಭಿತ್ತಿಚಿತ್ರವನ್ನು ತಯಾರಿಸುವಂತೆ ತಿಳಿಸಿದೆ. ಮನೆಕೆಲಸವಾಗಿ ನನ್ನ ವಿದ್ಯಾರ್ಥಿಗಳಿಗೆ ಅವರ ತಂದೆ-ತಾಯಿ, ಅಜ್ಜ-ಅಜ್ಜಿ, ಮನೆ ಅಥವಾ ಸಮುದಾಯದಿಂದ ಯಾರಿಂದಲಾದರೂ ಹಬ್ಬದ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳುವಂತೆ ಹೇಳಿದೆ. ಹಬ್ಬವನ್ನು ಇಲ್ಲಿ ಯಾವಾಗಲೂ ಆಚರಿಸಲಾಗಿದೆಯೇ? ಯಾವಾಗಲೂ ಅದು ಇಷ್ಟು ದೊಡ್ಡದಾಗಿತ್ತೇ? ಸಂಗೀತ ಬದಲಾಗಿದೆಯೇ? ಇಂತಹ ಕೆಲವು ಪ್ರಶ್ನೆಗಳನ್ನು ನಮೂನೆಯಾಗಿ ಕೊಟ್ಟೆ. ಇಡೀ ವಾರ ಪ್ರತೀ ದಿನ ಒಂದು ಪಾಠದ ಭಿತ್ತಿಪತ್ರ ಸಿದ್ಧಪಡಿಸಲು ನನ್ನ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಿದೆ.
>
> ಗುಂಪಿನಿಂದ ಗುಂಪಿಗೆ ನಾನು ಚಲಿಸುತ್ತಾ ಅವರನ್ನು ಗಮನಿಸಿದೆ, ಆಲಿಸಿದೆ ಹಾಗೂ ಅಗತ್ಯವಿದ್ದಲ್ಲಿ ಸಹಾಯ ಮಾಡಿದೆ.
>
> ವಿದ್ಯಾರ್ಥಿಗಳು ಭಿತ್ತಿಚಿತ್ರದ ಮೇಲೆ ಶಾಲೆಯ ಭಾಷೆಯಲ್ಲಿ ಅಥವಾ ಮನೆ ಭಾಷೆಯಲ್ಲಿ ಅಥವಾ ಎರಡನ್ನೂ ಉಪಯೋಗಿಸಿ ಬರೆಯಬಹುದೆಂದು ವಿವರಿಸಿದೆ. ಅವರಲ್ಲಿ ಕೆಲವರು ಇದೇ ಮೊದಲ ಬಾರಿಗೆ ತರಗತಿಯಲ್ಲಿ ಮನೆಯ ಭಾಷೆಯನ್ನು ಬಳಸಿ ಬರೆದಿದ್ದರು. ಆ ರೀತಿ ಮಾಡುವಾಗ ಅವರು ಬಹಳ ಸಂಭ್ರಮಿಸಿದರು.
>
> ಪ್ರತಿ ಗುಂಪಿನ ವಿದ್ಯಾರ್ಥಿಗಳು ತಾವು ಸಿದ್ಧಪಡಿಸಿದ ಭಿತ್ತಿಚಿತ್ರವನ್ನು ಇಡೀ ತರಗತಿಗೆ ಪ್ರಸ್ತುತ ಪಡಿಸಿದರು. ಅವರನ್ನು ತರಗತಿಯ ಇತರ ವಿದ್ಯಾರ್ಥಿಗಳು ಹಾಗೂ ನಾನು ಪ್ರಶ್ನಿಸಿದೆವು. ನಾವೆಲ್ಲರೂ ಬಹಳಷ್ಟು ಕಲಿತೆವು. ನಂತರ ಬಣ್ಣ ಬಣ್ಣದ ಭಿತ್ತಿಚಿತ್ರಗಳನ್ನು ಎಲ್ಲರೂ ಓದಲು ಹಾಗೂ ಆನಂದ ಪಡಲು ಗೋಡೆಯ ಮೇಲೆ ಅಂಟಿಸಿದೆ.

### ಚಿಂತನೆಗೊಂದು ಕ್ಷಣ

- ಈ ಯೋಜನಾ ಕಾರ್ಯದಲ್ಲಿ ಶಿಕ್ಷಕಿ ರಮ್ಯರವರಿಗೆ ತಮ್ಮ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡಲು ದೊರೆತ ಅವಕಾಶಗಳಾವುವು?
- ಕಿರಿಯ ವಿದ್ಯಾರ್ಥಿಗಳಿಗೆ ಈ ಯೋಜನಾ ಕಾರ್ಯವನ್ನು ನೀವು ಹೇಗೆ ವಹಿಸುವಿರಿ?
- ಹಿರಿಯ ವಿದ್ಯಾರ್ಥಿಗಳಿಗೆ ಯೋಜನಾ ಕಾರ್ಯವನ್ನು ಹೇಗೆ ವಿಸ್ತರಿಸಬಹುದು?

ಚಟುವಟಿಕೆಗಳ ಸರಣಿಯು ವಿದ್ಯಾರ್ಥಿಗಳಿಗೆ ಅವರ ಭಾಷೆ ಹಾಗೂ ಸಾಕ್ಷರತೆ (ಅಕ್ಷರ ಜ್ಞಾನ)ಯ ಕೌಶಲಗಳನ್ನು ಬೆಳೆಸಿಕೊಳ್ಳಲು ಹಲವಾರು ಅವಕಾಶಗಳನ್ನು ಒದಗಿಸಿತು. ಅದು ಒಳಗೊಂಡ ಅಂಶಗಳೆಂದರೆ-

- ಇಡೀ ತರಗತಿ ಹಾಗೂ ಸಣ್ಣ ಗುಂಪು ಚರ್ಚೆಗಳು.
- ಅವರ ಕುಟುಂಬ ಹಾಗೂ ಸಮುದಾಯದ ಸದಸ್ಯರೊಂದಿಗೆ ಮಾತುಕತೆ, ಸಂಭಾಷಣೆಗಳು.
- ಟಿಪ್ಪಣಿ ತಯಾರಿಸುವಿಕೆ.
- ಬರವಣಿಗೆ.
- ಮೌಖಿಕ ಪ್ರಸ್ತುತಿಗಳು.
- ಕ್ರಿಯಾಶೀಲ ಆಲಿಸುವಿಕೆ.
- ಪ್ರಶ್ನಿಸುವಿಕೆ.

ಪ್ರಾರಂಭದಿಂದ ಕೊನೆಯವರೆಗೂ ವಿದ್ಯಾರ್ಥಿಗಳನ್ನು ಅವರ ಶಾಲೆ ಹಾಗೂ ಮನೆ ಭಾಷೆಗಳೆರಡನ್ನೂ ಬಳಸಲು ಪ್ರೋತ್ಸಾಹಿಸಲಾಯಿತು.

ಯೋಜನಾಕಾರ್ಯದ ಪ್ರಮುಖ ಅಂಶ ವಿದ್ಯಾರ್ಥಿಗಳ ಸ್ಥಳೀಯ ಜ್ಞಾನವಾಗಿತ್ತು. ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿ ಹಾಗೂ ಗುಂಪುಗಳಲ್ಲಿ ಪರಿವೀಕ್ಷಣೆ ಮಾಡಲು ಶಿಕ್ಷಕರಿಗೆ ಸಮಯವಿತ್ತು. ವಿದ್ಯಾರ್ಥಿಗಳ ಕೌಶಲಗಳು ಹಾಗೂ ಭಾಗವಹಿಸುವಿಕೆಯ ಕುರಿತು ಒಂದು ತಪಶೀಲು ಪಟ್ಟಿ ಅಥವಾ ಟಿಪ್ಪಣಿ ನಿರ್ವಹಿಸಲು ಶಿಕ್ಷಕರಿಗೆ ಸಾಧ್ಯವಾಯಿತು.

ಇಂತಹ ಯೋಜನಾ ಕಾರ್ಯಗಳಲ್ಲಿ ಕಿರಿಯ ವಿದ್ಯಾರ್ಥಿಗಳಿಗೆ ಮಾತನಾಡುವಿಕೆ ಹಾಗೂ ಆಲಿಸುವಿಕೆಗೆ ಹೆಚ್ಚು ಒತ್ತು ಕೊಡಬೇಕು. ಹಬ್ಬದ ವಿಷಯಗಳನ್ನು ಕುರಿತು ಕಿರಿಯ ವಿದ್ಯಾರ್ಥಿಗಳೂ ಸಹ ಚಿತ್ರ ಬಿಡಿಸಲು ಹಾಗೂ ನಾಟಕದ ರೂಪದಲ್ಲಿ ಪ್ರಸ್ತುತ ಪಡಿಸಲು ಸಮರ್ಥರಾದರು. ಹಿರಿಯ ವಿದ್ಯಾರ್ಥಿಗಳಿಗೆ ಹಬ್ಬಗಳ ಕುರಿತು ವಿಶೇಷ ಶಬ್ದ ಭಂಡಾರ ಹಾಗೂ ಜ್ಞಾನವನ್ನು ಬಳಸುವ, ಭಾಷೆ, ಇತಿಹಾಸ ಹಾಗೂ ಸಾಂಪ್ರದಾಯಿಕ ಸಂಸ್ಕೃತಿಯನ್ನು ಬೆಳೆಸುವ, ಸಂಶೊಧನೆಯನ್ನು ಸಮ್ಮಿಳನಗೊಳಿಸುವ ಲಿಖಿತ ಯೋಜನಾ ಕಾರ್ಯಗಳು ಹೆಚ್ಚು ಸೂಕ್ತ.

ಪ್ರಮುಖ ಸಂಪನ್ಮೂಲ 'ಕಲಿಕೆಗಾಗಿ ಮಾತು ಎಂಬುದು ನಿಮ್ಮ ವಿದ್ಯಾರ್ಥಿಗಳಲ್ಲಿ 'ಸಹಯೋಗ ಕಾರ್ಯದ ಮಹತ್ವ' ಕುರಿತು ಹೆಚ್ಚಿನ ಐಡಿಯಾಗಳನ್ನು ಒಳಗೊಂಡಿದೆ.



ವಿಡಿಯೋ: ಕಲಿಕೆಗಾಗಿ ಮಾತು

## 4 ಸಾರಾಂಶ

ಶಾಲೆಯಲ್ಲಿ ನಿಮ್ಮ ವಿದ್ಯಾರ್ಥಿಗಳ ಭಾಷೆ ಹಾಗೂ ಸಾಕ್ಷರತೆ (ಅಕ್ಷರ ಜ್ಞಾನ)ಯ ಕೌಶಲಗಳನ್ನು ಬೆಳೆಸಲು ಅವರ ಮನೆ ಹಾಗೂ ಸಮುದಾಯ ಆಧಾರಿತ ಅನುಭವಗಳನ್ನು ಬಳಸಿಕೊಳ್ಳುವುದರ ಪ್ರಾಮುಖ್ಯತೆ ಹಾಗೂ ಮಹತ್ವವನ್ನು ಈ ಘಟಕದಲ್ಲಿ ವಿವರಿಸಲಾಗಿದೆ. ವಿದ್ಯಾರ್ಥಿಗಳಿಗೆ, ಶಾಲೆಯ ಹೊರಗಿನ ತಮ್ಮ ಚಟುವಟಿಕೆಗಳು ಹಾಗೂ ಭಾಷೆಗಳಿಗೆ ಶಿಕ್ಷಕರು ಮಹತ್ವ ನೀಡುತ್ತಿದ್ದಾರೆಂದು ತಿಳಿದಾಗ, ಶಾಲೆಯಲ್ಲಿ ಕಲಿಯಲು ಹೆಚ್ಚು ಉತ್ಸುಕರಾಗುತ್ತಾರೆ ಹಾಗೂ ಹೆಚ್ಚು ಆತ್ಮವಿಶ್ವಾಸವುಳ್ಳವರಾಗುತ್ತಾರೆ. ನಿಮ್ಮ ವಿದ್ಯಾರ್ಥಿಗಳೊಂದಿಗೆ ನಿಯತವಾಗಿ ಸಂಭಾಷಣೆಗಳು, ಚರ್ಚೆಗಳನ್ನು ನಡೆಸಿ, ಅವರು ಶಾಲೆಯ ಹೊರಗೆ ಹೊಂದಿರುವ ಆಸಕ್ತಿಗಳನ್ನು ತಿಳಿಯುವ ಮೂಲಕ ಅವರ ಅನುಭವಗಳಿಗೆ ಮಹತ್ವ ನೀಡುತ್ತೀರೆಂಬುದನ್ನು ವ್ಯಕ್ತಪಡಿಸಬಹುದು.

ಈ ಘಟಕವು ವಿದ್ಯಾರ್ಥಿಗಳ, ಅವರ ಕುಟುಂಬದ ಸದಸ್ಯರ ಹಾಗೂ ಸಮುದಾಯದ ಜ್ಞಾನವನ್ನು ಬಳಸುವ ಮೂಲಕ ನೀವು ಪಠ್ಯಪುಸ್ತಕದಲ್ಲಿನ ವಿಷಯಗಳನ್ನು ಹೆಚ್ಚು ಅರ್ಥಪೂರ್ಣ ಹಾಗೂ ಪ್ರಸ್ತುತವಾಗಿರುವಂತೆ ಮಾಡಲು ಹಲವಾರು ವಿಧಾನಗಳ ಕುರಿತು ಸ್ಥೂಲ ವಿವರಣೆಯನ್ನು ಒದಗಿಸಿದೆ.

## ಸಂಪನ್ಮೂಲಗಳು

### ಸಂಪನ್ಮೂಲ1: ಎಲ್ಲರನ್ನೂ ಒಳಗೊಳ್ಳುವುದು

'ಎಲ್ಲರನ್ನೂ ಒಳಗೊಳ್ಳುವುದು' ಎಂಬುದರ ಅರ್ಥವೇನು?

ಸಂಸ್ಕೃತಿ ಹಾಗೂ ಸಮಾಜದಲ್ಲಿನ ವೈವಿಧ್ಯತೆಯು ತರಗತಿಯಲ್ಲಿ ಪ್ರತಿಬಿಂಬಿಸುತ್ತದೆ. ವಿದ್ಯಾರ್ಥಿಗಳು ವಿವಿಧ ಭಾಷೆ, ಆಸಕ್ತಿ ಹಾಗೂ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಅವರು ವಿವಿಧ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳಿಂದ ಬಂದಿರುತ್ತಾರೆ.

ನಾವು ಈ ವಿಭಿನ್ನತೆಗಳನ್ನು ಕಡೆಗಣಿಸದೆ, ಸಂಭ್ರಮಿಸಬೇಕು. ಏಕೆಂದರೆ ನಮ್ಮ ಅನುಭವಾತೀತವಾದದ್ದನ್ನು ತಿಳಿಯಲು, ಒಬ್ಬರು ಮತ್ತೊಬ್ಬರನ್ನು ತಿಳಿಯಲು ಈ ವಿಭಿನ್ನತೆಗಳು ಸಾಧನವಾಗಬಲ್ಲವು. ಎಲ್ಲ ವಿದ್ಯಾರ್ಥಿಗಳು ಸ್ಥಾನಮಾನ, ಸಾಮರ್ಥ್ಯ ಹಾಗೂ ಹಿನ್ನೆಲೆಯ ಬೇಧವಿಲ್ಲದೆ ಕಲಿಯುವ ಅವಕಾಶ ಹಾಗೂ ಶಿಕ್ಷಣಕ್ಕೆ ಹಕ್ಕನ್ನು ಪಡೆದಿದ್ದಾರೆ. ಈ ಅಂಶವನ್ನು ಭಾರತದಲ್ಲಿನ ಕಾನೂನು ಹಾಗೂ ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳಲ್ಲಿ ಗುರುತಿಸಲಾಗಿದೆ. 2014ರಲ್ಲಿ ಪ್ರಧಾನಮಂತ್ರಿ ಮೋದಿಯವರು ತಮ್ಮ ಮೊದಲ ಭಾಷಣದಲ್ಲಿ ಭಾರತದ

ಎಲ್ಲ ಪ್ರಜೆಗಳಿಗೆ ಅವರ ಜಾತಿ, ಅಥವಾ ಆದಾಯವನ್ನು ಲೆಕ್ಕಿಸದೆ ಬೆಲೆ ಕೊಡಬೇಕಾದ ಪ್ರಾಮುಖ್ಯತೆಯನ್ನು ಕುರಿತು ಒತ್ತಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಶಾಲೆಗಳು ಹಾಗೂ ಶಿಕ್ಷಕರ ಪಾತ್ರ ಬಹಳ ಮಹತ್ವಪೂರ್ಣವಾದುದಾಗಿದೆ.

ಬೇರೆಯವರ ಕುರಿತು ನಮಗೆಲ್ಲರಿಗೂ ಕೆಲವು ಅಭಿಪ್ರಾಯಗಳು ಹಾಗೂ ಪೂರ್ವಾಗ್ರಹಗಳಿದ್ದು, ಅವುಗಳನ್ನು ನಾವು ಗಮನಿಸದಿರಬಹುದು ಅಥವಾ ವ್ಯಕ್ತಪಡಿಸದಿರಬಹುದು. ಶಿಕ್ಷಕರಾಗಿ ಪ್ರತಿ ವಿದ್ಯಾರ್ಥಿಗಳ ಶೈಕ್ಷಣಿಕ ಅನುಭವವನ್ನು ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ಪ್ರಭಾವಗೊಳಿಸುವ ಶಕ್ತಿ ನಿಮ್ಮಲ್ಲಿದೆ. ನಿಮಗೆ ತಿಳಿದು ಅಥವಾ ತಿಳಿಯದೆಯೇ ನಿಮ್ಮಲ್ಲಿನ ಪೂರ್ವಾಗ್ರಹಗಳು ಹಾಗೂ ಅಭಿಪ್ರಾಯಗಳು ನಿಮ್ಮ ವಿದ್ಯಾರ್ಥಿಗಳು ಎಷ್ಟು ಸಮಾನವಾಗಿ ಕಲಿಯುತ್ತಾರೆಂಬುದರ ಮೇಲೆ ತಮ್ಮ ಪ್ರಭಾವ ಬೀರುತ್ತವೆ.

ನಿಮ್ಮ ವಿದ್ಯಾರ್ಥಿಗಳನ್ನು ಅಸಮಾನವಾಗಿ ಕಾಣುವುದರ ವಿರುದ್ಧ ರಕ್ಷಿಸಲು ನೀವು ಕೆಲವು ಕ್ರಮಗಳನ್ನು ಕೈಗೊಳ್ಳಬಹುದು.

ಕಲಿಕೆಯಲ್ಲಿ ನೀವು ಎಲ್ಲರೂ ಒಳಗೊಳ್ಳುವುದನ್ನು ದೃಢಪಡಿಸಿಕೊಳ್ಳಲು ಮೂರು ಪ್ರಮುಖ ತತ್ವಗಳು;

- *ಲಕ್ಷ್ಯ ಕೊಡುವುದು(noticing):* ಪರಿಣಾಮಕಾರಿ ಶಿಕ್ಷಕರು ಬಹುಬೇಗ ಗಮನಿಸುವರು, ಯಥಾದೃಷ್ಟಿಯುಳ್ಳವರು ಹಾಗೂ ಸೂಕ್ಷ್ಮಗ್ರಾಹಿಗಳೂ ಆಗಿರುತ್ತಾರೆ. ಅವರು ತಮ್ಮ ವಿದ್ಯಾರ್ಥಿಗಳಲ್ಲಿ ಬದಲಾವಣೆಗಳಿಗೆ ಲಕ್ಷ್ಯ ಕೊಡುತ್ತಾರೆ. ನೀವು ಬಹುಬೇಗ ಗಮನಿಸುವವರಾಗಿದ್ದರೆ, ಒಬ್ಬ ವಿದ್ಯಾರ್ಥಿ ಏನನ್ನಾದರೂ ಉತ್ತಮವಾಗಿ ಮಾಡಿದಾಗ, ವಿದ್ಯಾರ್ಥಿಗಳಿಗೆ ಸಹಾಯ ಬೇಕಾದಾಗ ಹಾಗೂ ಅವರು ಬೇರೆಯವರೊಂದಿಗೆ ಹೇಗಿದ್ದಾರೆಂಬುದಕ್ಕೆ ಲಕ್ಷ್ಯ ಕೊಡುತ್ತೀರಿ. ವಿದ್ಯಾರ್ಥಿಗಳಲ್ಲಿನ ಬದಲಾವಣೆ, ಅವರ ಮನೆಯ ಸನ್ನಿವೇಶಗಳು ಹಾಗೂ ಇತರ ವಿಚಾರಗಳಲ್ಲಿ ಪ್ರತಿಬಿಂಬಿತವಾಗುತ್ತಿರುವುದನ್ನು ನೀವು ಅರ್ಥಮಾಡಿಕೊಳ್ಳಬಲ್ಲಿರಿ. ಎಲ್ಲರನ್ನೂ ತೊಡಗಿಸಿಕೊಳ್ಳಬೇಕಾದರೆ ನೀವು ನಿಮ್ಮ ವಿದ್ಯಾರ್ಥಿಗಳೆಡೆಗೆ ಪ್ರತಿದಿನ ನಿಯತವಾಗಿ ಲಕ್ಷ್ಯ ಕೊಡಬೇಕು ಹಾಗೂ ಭಾಗವಹಿಸಲು ಸಾಧ್ಯವಾಗದಿರುವ ಅಥವಾ ತಮ್ಮನ್ನು ಮೂಲೆಗುಂಪಾಗಿಸಲಾಗಿದೆ ಎಂದು ಭಾವಿಸಿರುವ ವಿದ್ಯಾರ್ಥಿಗಳನ್ನು ನಿರ್ದಿಷ್ಟವಾಗಿ ಗಮನಿಸಬೇಕು.
- *ಆತ್ಮಗೌರವದ ಮೇಲೆ ಕೇಂದ್ರಿಕರಿಸುವುದು* : ಉತ್ತಮ ಪ್ರಜೆಗಳೆಂದರೆ ತಾವು ಏನಾಗಿರುವರೋ ಆ ಕುರಿತು ನೆಮ್ಮದಿಯಾಗಿರುವವರು. ಅವರಿಗೆ ಆತ್ಮಗೌರವವಿದ್ದು, ತಮ್ಮ ಬಲ ಹಾಗೂ ದೌರ್ಬಲ್ಯಗಳನ್ನು ತಿಳಿದಿರುತ್ತಾರೆ. ಇತರರೊಂದಿಗೆ, ಅವರ ಹಿನ್ನೆಲೆಯನ್ನು ಲೆಕ್ಕಿಸದೇ, ಧನಾತ್ಮಕ ಸಂಬಂಧಗಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಅವರು ತಮ್ಮನ್ನು ಹಾಗೂ ಇತರರನ್ನು ಗೌರವಿಸುತ್ತಾರೆ. ಶಿಕ್ಷಕರಾಗಿ ನೀವು ಕಿರಿಯ ವಯಸ್ಸಿನ ಮಕ್ಕಳ ಆತ್ಮ-ಗೌರವದ ಮೇಲೆ ಬಲವಾದ ಪ್ರಭಾವ ಬೀರಬಲ್ಲಿರಿ;ಈ ಶಕ್ತಿಯ ಕುರಿತು ನಿಮಗೆ ಎಚ್ಚರವಿರಲಿ ಹಾಗೂ ಇದನ್ನು ಪ್ರತಿ ವಿದ್ಯಾರ್ಥಿಯ ಆತ್ಮಗೌರವವನ್ನು ನಿರ್ಮಿಸಲು ಬಳಸಿ.
- *ನಮ್ಯತೆ (flexibility)*: ತರಗತಿಯಲ್ಲಿ ನಿಮ್ಮ ಯೋಜನೆಗಳು ಅಥವಾ ಚಟುವಟಿಕೆಗಳು ಯಾವುದೇ ನಿರ್ದಿಷ್ಟ ವಿದ್ಯಾರ್ಥಿಗೆ ಅಥವಾ ಗುಂಪುಗಳಿಗೆ ಸಹಾಯಕವಾಗುತ್ತಿಲ್ಲವೆನಿಸಿದಾಗ ಬದಲಾವಣೆಗೆ ಸಿದ್ಧರಾಗಿರಿ. ನಮ್ಯತೆಗೆ ಸಿದ್ಧರಾಗಿದ್ದಾಗ ಹೊಂದಾಣಿಕೆಗಳಿಗೆ ಅವಕಾಶವಿರುತ್ತದೆ. ಇದರಿಂದಾಗಿ ಎಲ್ಲ ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ತೊಡಗಿಸಬಹುದು.

**ಸದಾಕಾಲ ಬಳಸಬಹುದಾದ ಮಾರ್ಗಗಳು:**

- *ಉತ್ತಮ ವರ್ತನೆಗೆ ಮಾದರಿಯಾಗುವುದು* **:** ಎಲ್ಲ ವಿದ್ಯಾರ್ಥಿಗಳನ್ನು ಅವರ ಜನಾಂಗೀಯ ಗುಂಪು, ಧರ್ಮ ಅಥವಾ ಲಿಂಗವನ್ನು ಲೆಕ್ಕಿಸದೆ ಉತ್ತಮವಾಗಿ ನಡೆಸಿಕೊಳ್ಳುವುದಕ್ಕೆ ಉದಾಹರಣೆಯಾಗಿರಿ. ಎಲ್ಲ ವಿದ್ಯಾರ್ಥಿಗಳನ್ನು ಗೌರವದಿಂದ ಕಾಣಿರಿ ಹಾಗೂ ಎಲ್ಲರಿಗೂ ಸಮಾನವಾಗಿ ಬೆಲೆಕೊಡುವಿರೆಂಬುದನ್ನು ನಿಮ್ಮ ಪಾಠದ ಮೂಲಕ ಸ್ಪಷ್ಟಪಡಿಸಿ. ಅವರೊಂದಿಗೆ ಗೌರವದಿಂದ ಮಾತನಾಡಿ, ಸೂಕ್ತವಾಗಿದ್ದಾಗ ಅವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಿ ಮತ್ತು ಎಲ್ಲರಿಗೂ ಪ್ರಯೋಜನಕ್ಕೆ  ಬರುವ ಕಾರ್ಯಗಳನ್ನು ನಿರ್ವಹಿಸುವ ಮೂಲಕ ತರಗತಿಯ ಜವಾಬ್ದಾರಿಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ.
- *ಉನ್ನತ ನಿರೀಕ್ಷೆಗಳು*: ಸಾಮರ್ಥ್ಯವು ನಿಗದಿಪಡಿಸಿದುದಲ್ಲ; ಸೂಕ್ತವಾದ ಆಸರೆ ನೀಡಿದರೆ ಎಲ್ಲ ವಿದ್ಯಾರ್ಥಿಗಳು ಕಲಿಯಬಲ್ಲರು ಹಾಗೂ ಪ್ರಗತಿ ಹೊಂದಬಲ್ಲರು. ನಿಮ್ಮ ತರಗತಿಯಲ್ಲಿ ಯಾವುದೇ ವಿದ್ಯಾರ್ಥಿ ನೀವು ಮಾಡಿಸುತ್ತಿರುವ ಚಟುವಟಿಕೆಯನ್ನು ಅರ್ಥಮಾಡಿಕೊಳ್ಳಲು ಕಷ್ಟಪಟ್ಟರೆ, ಆ ವಿದ್ಯಾರ್ಥಿ ಎಂದಿಗೂ ಅರ್ಥಮಾಡಿಕೊಳ್ಳಲಾರನೆಂದು ಭಾವಿಸಬೇಡಿ. ಶಿಕ್ಷಕರಾಗಿ ನಿಮ್ಮ ಪಾತ್ರ ಪ್ರತಿ ವಿದ್ಯಾರ್ಥಿ ಕಲಿಯುವಂತೆ ಮಾಡಲು ಎಷ್ಟು ಉತ್ತಮವಾಗಿ ಕ್ರಮವಹಿಸಬೇಕೆಂಬುದಾಗಿದೆ. ನಿಮ್ಮ ತರಗತಿಯ

ಪ್ರತಿಯೊಬ್ಬರ ಬಗ್ಗೆಯೂ ನಿಮಗೆ ಉನ್ನತ ನಿರೀಕ್ಷೆಗಳಿದ್ದರೆ, ನಿಮ್ಮ ವಿದ್ಯಾರ್ಥಿಗಳು ತಾವು ನಿರಂತರ ಪ್ರಯತ್ನದಿಂದ ಕಲಿಯಬಹುದೆಂದು ಭಾವಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ವರ್ತನೆಯ ಕುರಿತಾಗಿಯೂ ಉನ್ನತ ನಿರೀಕ್ಷೆಗಳಿರಬೇಕು. ನಿರೀಕ್ಷೆಗಳು ಸ್ಪಷ್ಟವಾಗಿರುವುದರ ಬಗ್ಗೆ ಹಾಗೂ ವಿದ್ಯಾರ್ಥಿಗಳು ಪರಸ್ಪರ ಗೌರವಿಸುವುದರ ಬಗ್ಗೆ ಖಚಿತಪಡಿಸಿಕೊಳ್ಳಿ.

- *ನಿಮ್ಮ ತರಗತಿಯಲ್ಲಿ ವೈವಿಧ್ಯತೆಯನ್ನು ನಿರ್ಮಿಸಿ:* ವಿದ್ಯಾರ್ಥಿಗಳು ಬೇರೆ ಬೇರೆ ವಿಧಾನಗಳಲ್ಲಿ ಕಲಿಯುತ್ತಾರೆ. ತಮ್ಮ ಐಡಿಯಾಗಳನ್ನು ವ್ಯಕ್ತಪಡಿಸುವುದಕ್ಕಾಗಿ ಕೆಲವರು ಬರೆಯಲು ಇಷ್ಟಪಡುತ್ತಾರೆ; ಇತರರು ಮನೋನಕ್ಷೆ (mind map), ಚಿತ್ರಗಳನ್ನು ಬಿಡಿಸಲು ಬಯಸುತ್ತಾರೆ. ಕೆಲವು ವಿದ್ಯಾರ್ಥಿಗಳು ಆಲಿಸುವುದರಲ್ಲಿ ಉತ್ತಮರು; ಕೆಲವರಿಗೆ ತಮ್ಮ ಐಡಿಯಾಗಳನ್ನು ಮಾತನಾಡುವ ಮೂಲಕ ವ್ಯಕ್ತಪಡಿಸಲು ಅವಕಾಶ ನೀಡಿದರೆ ಉತ್ತಮವಾಗಿ ಕಲಿಯುತ್ತಾರೆ. ನಿಮ್ಮ ಕ್ರಮ ಎಲ್ಲ ವಿದ್ಯಾರ್ಥಿಗಳಿಗೂ, ಎಲ್ಲ ಕಾಲಕ್ಕೂ ಹೊಂದಲಾರದು. ಆದರೆ ನಿಮ್ಮ ಬೋಧನೆಯಲ್ಲಿ ವೈವಿಧ್ಯತೆಯನ್ನು ಉಂಟುಮಾಡಿ, ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಒದಗಿಸಬಹುದು.
- *ಕಲಿಕೆಯನ್ನು ದೈನಂದಿನ ಜೀವನಕ್ಕೆ ಸಂಬಂಧೀಕರಿಸಿ:* ಕೆಲವು ವಿದ್ಯಾರ್ಥಿಗಳಿಗೆ, ನೀವು ಮಾಡಲು ತಿಳಿಸುವ ಕಲಿಕಾ ಚಟುವಟಿಕೆಗಳು ಅವರ ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟಿಲ್ಲವೆನಿಸಬಹುದು. ಅಂತಹ ಸಂದರ್ಭಗಳಲ್ಲಿ ನೀವು ಸಾಧ್ಯವಿರುವೆಡೆಯೆಲ್ಲಾ ವಿದ್ಯಾರ್ಥಿಗಳ ಸ್ವಂತ ಅನುಭವಗಳಿಂದ ಉದಾಹರಣೆಗಳನ್ನು ಬಳಸಿ ಕಲಿಕೆಗೆ ಸಂಬಂಧೀಕರಿಸುವ ಮೂಲಕ ಸ್ಪಂದಿಸಬಹುದು.
- *ಭಾಷೆಯ ಬಳಕೆ:* ನೀವು ಬಳಸುವ ಭಾಷಯ ಬಗ್ಗೆ ಜಾಗರೂಕತೆಯಿಂದ ಯೋಚಿಸಿ. ಧನಾತ್ಮಕವಾಗಿ ಭಾಷೆಯ ಬಳಕೆ ಮಾಡಿ, ಪ್ರಶಂಸಿಸಿ ಹಾಗೂ ವಿದ್ಯಾರ್ಥಿಗಳನ್ನು ಅಪಹಾಸ್ಯ ಮಾಡಬೇಡಿ. ವಿದ್ಯಾರ್ಥಿಗಳ ವರ್ತನೆಯನ್ನು ಟೀಕಿಸಿ; ಅವರನ್ನು ಕುರಿತಲ್ಲ. 'ನೀನು ಈ ದಿನ ನನಗೆ ಕಿರಿಕಿರಿ ಉಂಟುಮಾಡುತ್ತಿರುವೆ' ಎಂಬುದು ಬಹಳ ವೈಯಕ್ತಿಕವಾದ ಟೀಕೆ. ಬದಲಾಗಿ, 'ಈ ದಿನ ನಿನ್ನ ವರ್ತನೆ ಕಿರಿಕಿರಿ ಉಂಟುಮಾಡುವಂತಿದೆ. ನಿನ್ನ ಗಮನ ಕೇಂದ್ರಿಕರಿಸಲು ಕಷ್ಟವಾಗುತ್ತಿರುವುದಕ್ಕೆ ಏನಾದರೂ ಕಾರಣವಿದೆಯೇ?' ಎಂದು ಹೇಳುವುದು ಉತ್ತಮವಾದುದು ಹಾಗೂ ಹೆಚ್ಚು ಸಹಾಯ ಮಾಡುವಂತಹುದಾಗಿದೆ.
- *ಏಕಪ್ರಕಾರದ ಸವಾಲುಗಳು:* ಹೆಣ್ಣು ಮಕ್ಕಳನ್ನು ಏಕಪ್ರಕಾರವಲ್ಲದ ಪಾತ್ರಗಳಲ್ಲಿ ಗುರುತಿಸುವ ಸಂಪನ್ಮೂಲಗಳನ್ನು ಬಳಸಿ ಅಥವಾ ಶಾಲೆಗೆ ಮಹಿಳಾ ವಿಜ್ಞಾನಿಯಂತಹ ಮಾದರಿ ವ್ಯಕ್ತಿಗಳನ್ನು ಆಹ್ವಾನಿಸಿ, ನಿಮ್ಮ ಸ್ವಂತ ಲಿಂಗ ಏಕಪ್ರಕಾರದ ಬಗ್ಗೆ ಜಾಗೃತವಾಗಿರಿ; ಹೆಣ್ಣು ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸುತ್ತಾರೆ ಹಾಗೂ ಗಂಡು ಮಕ್ಕಳು ಕಾಳಜಿ ವಹಿಸುತ್ತಾರೆ ಎಂಬುದು ನಮಗೆ ತಿಳಿದಿದ್ದರೂ ವ್ಯಕ್ತಪಡಿಸುವ ರೀತಿಯಲ್ಲಿ ವ್ಯತ್ಯಾಸ ಮಾಡುತ್ತೇವೆ. ಇದಕ್ಕೆ ಕಾರಣ ಸಮಾಜದಲ್ಲಿ ಈ ಕುರಿತು ನಾವು ಮಾತನಾಡುವ ರೀತಿಯಲ್ಲಿ ವ್ಯತ್ಯಾಸವಿರುವುದನ್ನು ರೂಢಿಸಿಕೊಂಡಿರುವುದು.

**ಸುಭದ್ರವಾದ ಹಾಗೂ ಸ್ವಾಗತಿಸುವ ಕಲಿಕಾ ವಾತಾವರಣ ಸೃಷ್ಟಿಸಿ.**

ಶಾಲೆಯು ಎಲ್ಲ ವಿದ್ಯಾರ್ಥಿಗಳಿಗೂ ಸುಭದ್ರ ಹಾಗೂ ಸ್ವಾಗತಾರ್ಹವಾಗಿರಬೇಕು. ಪ್ರತಿಯೊಬ್ಬರೂ ಪರಸ್ಪರ ಸ್ನೇಹ ಹಾಗೂ ಗೌರವದಿಂದಿರಲು ಪ್ರೋತ್ಸಾಹಿಸುವ ಮೂಲಕ, ನಿಮ್ಮ ವಿದ್ಯಾರ್ಥಿಗಳು ಸ್ವಾಗತಿಸಲ್ಪಡುವಂತೆ ಮಾಡಲು ನೀವು ಸಮರ್ಥರಿದ್ದೀರಿ. ವಿಭಿನ್ನ ವಿದ್ಯಾರ್ಥಿಗಳಿಗೆ ಶಾಲೆ ಹಾಗೂ ತರಗತಿಯು ಹೇಗೆ ಕಾಣಬಹುದು ಮತ್ತು ಹೇಗೆ ಅನಿಸಬಹುದೆಂದು ಯೋಚಿಸಿ. ವಿದ್ಯಾರ್ಥಿಗಳು ಕುಳಿತುಕೊಳ್ಳುವ ವ್ಯವಸ್ಥೆಯ ಕುರಿತು ಯೋಚಿಸಿ. ದೈಹಿಕ, ಶ್ರವಣ, ದೃಷ್ಟಿ ಸಮಸ್ಯೆಯುಳ್ಳವರಿಗೆ ಪಾಠವನ್ನು ತಲುಪಲು ಅವಕಾಶವಿರುವೆಡೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿ. ನಾಚಿಕೆ ಸ್ವಭಾವದವರು ಹಾಗೂ ಸುಲಭವಾಗಿ ಗಮನ ಬೇರೆಡೆಗೆ ಹರಿಸುವ ವಿದ್ಯಾರ್ಥಿಗಳನ್ನು ಗುರುತಿಸಿ, ಅವರನ್ನು ಸುಲಭವಾಗಿ ಹೇಗೆ ತೊಡಗಿಸುವಂತೆ ಮಾಡಬಹುದೆಂಬುದನ್ನು ಪರಿಶೀಲಿಸಿ.

**ನಿರ್ದಿಷ್ಟ ಬೋಧನಾ ಮಾರ್ಗಗಳು**:

ಎಲ್ಲ ವಿದ್ಯಾರ್ಥಿಗಳನ್ನು ತೊಡಗಿಸಲು ನಿಮಗೆ ಸಹಾಯಕವಾಗುವ ಹಲವಾರು ನಿರ್ದಿಷ್ಟ ಮಾರ್ಗಗಳಿವೆ. ಈ ಕುರಿತು ಇತರ ಪ್ರಮುಖ ಸಂಪನ್ಮೂಲಗಳಲ್ಲಿ ಚರ್ಚಿಸಲಾಗಿದ್ದು, ಇಲ್ಲಿ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

- *ಪ್ರಶ್ನಿಸುವಿಕೆ:* ವಿದ್ಯಾರ್ಥಿಗಳನ್ನು ನೀವು ಕೈಮೇಲೆ ಮಾಡುವಂತೆ ತಿಳಿಸಿದರೆ, ಪ್ರತಿ ಬಾರಿ ಅದೇ ವಿದ್ಯಾರ್ಥಿಗಳು ಉತ್ತರಿಸಲು ಮುಂದಾಗುತ್ತಾರೆ. ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವಂತೆ ಹಾಗೂ ಉತ್ತರಗಳ ಬಗ್ಗೆ ಯೋಚಿಸುವಂತೆ ಹೆಚ್ಚು ವಿದ್ಯಾರ್ಥಿಗಳನ್ನು ತೊಡಗಿಸಲು ಇತರ ಮಾರ್ಗಗಳಿವೆ. ನೀವು ನಿರ್ದಿಷ್ಟವಾಗಿ ಪ್ರಶ್ನಿಸಬಹುದು. ಉತ್ತರಿಸಬೇಕಾದವರು ಯಾರೆಂಬುದನ್ನು ನೀವು

ತೀರ್ಮಾನಿಸುವುದಾಗಿ ಇಡೀ ತರಗತಿಗೆ ತಿಳಿಸಿ. ನಂತರ ತರಗತಿಯಲ್ಲಿ ಮುಂದಿನ ಸಾಲಿನಲ್ಲಿ ಕುಳಿತವರ ಬದಲು, ಹಿಂದಿನ ಸಾಲುಗಳಲ್ಲಿ, ಗೋಡೆಯ ಬದಿಗಳಲ್ಲಿ ಕುಳಿತಿರುವವರನ್ನು ಪ್ರಶ್ನಿಸಿ. ವಿದ್ಯಾರ್ಥಿಗಳಿಗೆ 'ಆಲೋಚಿಸಲು ಸಮಯ' ಕೊಡಿ. ನಿರ್ದಿಷ್ಟ ವಿದ್ಯಾರ್ಥಿಗಳಿಂದ ಭಾಗವಹಿಸುವಿಕೆಯನ್ನು ಆಹ್ವಾನಿಸಿ. ಆತ್ಮವಿಶ್ವಾಸವನ್ನು ಬೆಳೆಸಲು ಜೋಡಿ ಅಥವಾ ಗುಂಪು ಕಾರ್ಯವನ್ನು ಬಳಸಿ, ಆ ಮೂಲಕ ಪ್ರತಿಯೊಬ್ಬರನ್ನು ಇಡೀ ತರಗತಿ ಚರ್ಚೆಗಳಲ್ಲಿ ತೊಡಗಿಸಬಹುದು.

- *ಮೌಲ್ಯಮಾಪನ:* ಪ್ರತಿಯೊಬ್ಬ ವಿದ್ಯಾರ್ಥಿಯನ್ನು ನೀವು ಉತ್ತಮವಾಗಿ ತಿಳಿಯಲು ಸಹಾಯ ಮಾಡುವ ರೂಪಾಣಾತ್ಮಕ ಮೌಲ್ಯಮಾಪನದ ವಿವಿಧ ತಂತ್ರಗಳನ್ನು ಸಿದ್ಧಪಡಿಸಿಕೊಳ್ಳಿ. ವಿದ್ಯಾರ್ಥಿಗಳಲ್ಲಿ ಅಡಗಿರುವ ಸಾಮರ್ಥ್ಯಗಳು ಹಾಗೂ ಕೊರತೆಗಳನ್ನು ಹೊರತರಲು, ನೀವು ಸಾಮರ್ಥ್ಯಗಳ ಬಗ್ಗೆ ಸಾಮಾನ್ಯೀಕರಿಸಿದ ಅಭಿಪ್ರಾಯಗಳಿಂದ ಸುಲಭವಾಗಿ ಗುರುತಿಸಬಹುದಾದ ಅನಿಸಿಕೆಗಳಿಗಿಂತ, ರೂಪಣಾತ್ಮಕ ಮೌಲ್ಯಮಾಪನವು ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಈ ರೀತಿ ಮಾಡುವುದರಿಂದ ನೀವು ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯತೆಗಳಿಗೆ ಪ್ರತಿಕ್ರಿಯಿಸಲು ಸಮರ್ಥರಾಗುವಿರಿ
- *ಗುಂಪುಕೆಲಸ ಹಾಗೂ ಜೋಡಿ ಕೆಲಸ:* ನಿಮ್ಮ ತರಗತಿಯನ್ನು ಗುಂಪುಗಳಾಗಿ ವಿಭಾಗಿಸುವ ಬಗ್ಗೆ ಹಾಗೂ ಜೋಡಿಗಳನ್ನು ರಚಿಸುವ ವಿಧಾನದ ಬಗ್ಗೆ ಜಾಗರೂಕವಾಗಿ ಯೋಚಿಸಿ. ಎಲ್ಲರನ್ನೂ ತೊಡಗಿಸಿಕೊಳ್ಳುವ ಹಾಗೂ ಒಬ್ಬರು ಮತ್ತೊಬ್ಬರಿಗೆ ಬೆಲೆ ಕೊಡುವುದನ್ನು ಪ್ರೋತ್ಸಾಹಿಸುವ ಗುರಿ ಸಾಧನೆಯ ದೃಷ್ಟಿಯಿಂದ, ಎಲ್ಲ ವಿದ್ಯಾರ್ಥಿಗಳು ಪರಸ್ಪರ ಕಲಿಯಲು ಅವಕಾಶವಿರುವ ಬಗ್ಗೆ ಹಾಗೂ ತಮಗೆ ತಿಳಿದಿರುವ ಕುರಿತು ಆತ್ಮವಿಶ್ವಾಸ ಬೆಳೆಸಿಕೊಳ್ಳುವ ಬಗ್ಗೆ ಖಾತ್ರಿಪಡಿಸಿಕೊಳ್ಳಿ. ಕೆಲವು ವಿದ್ಯಾರ್ಥಿಗಳು ಸಣ್ಣಗುಂಪುಗಳಲ್ಲಿ ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಐಡಿಯಾಗಳನ್ನು ವ್ಯಕ್ತಪಡಿಸಲು ಆತ್ಮವಿಶ್ವಾಸ ಹೊಂದಿರುತ್ತಾರೆ. ಆದರೆ ಇಡೀ ತರಗತಿಯ ಮುಂದೆ ಹೇಳಲು ಸಾಧ್ಯವಾಗದಿರಬಹುದು.
- *ವಿಭೇದೀಕರಿಸುವುದು:* ವಿವಿಧ ಗುಂಪುಗಳಿಗೆ ವಿವಿಧ ಕಾರ್ಯಗಳನ್ನು ಹಂಚುವುದರಿಂದ ವಿದ್ಯಾರ್ಥಿಗಳಿಗೆ ತಾವು ಇರುವ ಹಂತದಿಂದ ಆರಂಭಿಸಿ, ಮುಂದುವರೆಸಲು ಸಾಧ್ಯವಾಗುತ್ತದೆ. ಮುಕ್ತಾಂತ ಕಾರ್ಯಗಳನ್ನು (open-ended tasks) ನೀಡುವುದರಿಂದ ವಿದ್ಯಾರ್ಥಿಗಳಿಗೆ ಯಶಸ್ಸು ನಿರ್ವಹಿಸಬೇಕಾದ ಕಾರ್ಯಗಳಲ್ಲಿ ಆಯ್ಕೆ ನೀಡಿದಾಗ, ಅವರ ಕಾರ್ಯದ ಕುರಿತು ಮಾಲೀಕತ್ವ ಭಾವನೆ ಮಾಡುವುದಲ್ಲದೇ, ತಮ್ಮ ಕಲಿಕೆಗೆ ತಾವೇ ಜವಾಬ್ದಾರರಾಗಲು ಸಹಾಯವಾಗುತ್ತದೆ. ವಿಶೇಷವಾಗಿ, ದೊಡ್ಡ ತರಗತಿಗಳಲ್ಲಿ, ಪ್ರತಿಯೊಬ್ಬರ ಕಲಿಕೆಯ ಅಗತ್ಯತೆಗಳನ್ನು ಗುರುತಿಸುವುದು ಕಷ್ಟ. ಆದರೆ, ವಿವಿಧ ಕಾರ್ಯಗಳು ಹಾಗೂ ಚಟುವಟಿಕೆಗಳನ್ನು ಬಳಸುವ ಮೂಲಕ ಸಾಧ್ಯವಾಗುತ್ತದೆ.

## ಪರಾಮರ್ಶನ ಗ್ರಂಥಗಳು/ ಗ್ರಂಥಸೂಚಿ


Austin, R. (ed.) (2009) *Letting the Outside In.* London: Trentham Books.

BBC News (2013) 'Is Indian storytelling a dying art?' (online), 23 March. Available from: http://www.bbc.co.uk/news/world-asia-india-21651933 (accessed 16 September 2014).

Bridges, L. (1995) *Creating Your Classroom Community*, Portland, ME: Stenhouse Publishers.

Kenner, C. (2000) *Home Pages: Literacy Links for Bilingual Children*. Stoke-on-Trent: Trentham Books.

Pattanayak, B., Gupta, D. and Singha, S. (undated) 'Local art education for whole child development: a case of Paitkar painting in Amadubi village' (online), supported by UNICEF-Jharkhand, JEPC, JTWRI. Available from: http://www.academia.edu/5937590/Towards_holistic_development_of_children_using_local_art_and_culture_in_Jharkhand_India (accessed 18 November 2014). This resource looks at the holistic development of children using local art and culture.

Webster, L. and Reed, S. (2012) *The Creative Classroom.* London: Collins.

## Acknowledgements

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.